ಒಎಸ್.ನಂ **359/13**

ಪಿ.ಡಬ್ಲ್ಯೂ **–2**

**ದಿನಾಂಕಃ 10.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು :- ಪ್ರತಿವಾದಿ ಪರ ಶ್ರೀ ಎ.ಜಿ.ಪಿ ವಕೀಲರಿಂದಃ-**

ನಿಪಿ 5 ರಲ್ಲಿ ನಮೂದಿಸಿರುವ ಸರ್ವೇ ನಂಬರಗಳ ಆಸ್ತಿಗಳು ನಮ್ಮ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಸರ್ವೇ ನಂ 42/30 ರ ಬಗ್ಗೆ ಮಾತ್ರ ಹೇಳಿದ್ದು, ಉಳಿದ ಆಸ್ತಿಗಳ ಬಗ್ಗೆ ಹೇಳಿಲ್ಲ ಎಂದರೆ ಸರಿ. ಉಳಿದ ಆಸ್ತಿಗಳ ಬಗ್ಗೆ ಹೇಳಲು ತೊಂದರೆ ಇರಲಿಲ್ಲ. ಸರ್ವೇ ನಂ 42/30 ರ 238 ಎಕರೆ ಅರಣ್ಯ ಜಮೀನಿನ ಒಳಗಡೆ ದಾವಾ ಆಸ್ತಿ ಬರುತ್ತದೆ ಎಂದರೆ ಸರಿ. ಸರ್ವೇ ನಂ 42/30 ರ 238 ಎಕರೆ ಆಸ್ತಿ ಪೂರ್ತಿ ಅರಣ್ಯಕ್ಕೆ ಸೇರಿರುತ್ತದೆ ಎಂದು ನೋಟಿಫಿಕೇಷನ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಅಳಗಂಜಿ ಮೀಸಲು ಅರಣ್ಯ ಪ್ರದೇಶದ ನಕಾಶೆಯನ್ನು ತೋರಿಸಿ ಅದರಲ್ಲಿ ಸರ್ವೇ ನಂ 42/30 ಗುರುತಿಸಿರುವ ಪ್ರದೇಶವನ್ನು ತೋರಿಸಿ ಅದು ದಾವಾ ಸ್ವತ್ತು ಆಗಿರುತ್ತದೆ ಎಂದರೆ ಸಾಕ್ಷಿ ಅರಣ್ಯದ ಆಚೆಗೆ ನಮ್ಮ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಅರಣ್ಯ ಪ್ರದೇಶದ ಒಳಗಡೆ ಬರುತ್ತದೆ ಎಂದರೆ ಸರಿಯಲ್ಲ. ಮುಂದುವರೆದು ಅರಣ್ಯದ ಅಂಚಿನಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ನಲ್ಲಿ ಅಕ್ಕ ಪಕ್ಕ ಅರಣ್ಯ ಬರುತ್ತದೆ ಎಂದು ತೋರಿಸಿಲ್ಲ ಎಂದರೆ ಸರ್ವೇ ನಂ 42 ಅರಣ್ಯ ಎಂದು ನುಡಿಯುತ್ತಾರೆ.

ದಾವಾ ಸ್ವತ್ತು ನನ್ನ ಪಿತ್ರಾರ್ಜಿತ ಆಸ್ತಿ ಅಥವಾ ಕ್ರಯದ ಮೂಲಕ ಬಂದಿರುತ್ತದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಅರಣ್ಯ ಅಧಿಕಾರಿಗಳು ದಾವಾ ಸ್ವತ್ತಿಗೆ ತೊಂದರೆ ಕೊಡಬೇಕಾದರೆ ದಾವಾ ಸ್ವತ್ತಿನ ಅಕ್ಕ ಪಕ್ಕ ಅರಣ್ಯ ಇರಬೇಕಾಗುತ್ತದೆ ಎಂದರೆ ಇದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಅಕ್ಕ ಪಕ್ಕ ಅರಣ್ಯ ಬರುತ್ತದೆ ಎಂದು ತೋರಿಸಿಲ್ಲ ಎಂದರೆ ಸರಿ. ಅರಣ್ಯಕ್ಕೆ ಸೇರಿದ ಜಮೀನನ್ನು ನನ್ನ ಜಮೀನು ಎಂದು ತೋರಿಸಿರುವುದರಿಂದ ಸುಳ್ಳು ಚೆಕ್ಕು ಬಂದಿ ನೀಡಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತೇನೆ ಎಂದು ತೋರಿಸುವುದಿಲ್ಲ ಎಂದರೆ ಸರಿಯಲ್ಲ. ಅರಣ್ಯ ಪ್ರದೇಶದ ಜಮೀನನ್ನು ಕಬಳಿಸಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**